# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | : | 538 |
| ಸದಸ್ಯರ ಹೆಸರು | : | ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 19.07.2024 |
| ಉತ್ತರಿಸುವವರು | : | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಎಷ್ಟು ಘನ ತ್ಯಾಜ್ಯ ವಿಲೇವಾರಿ ಘಟಕಗಳಿವೆ; ಮತ್ತು ಅದನ್ನು ಯಾರ ಮೂಲಕ ನಿರ್ವಹಣೆಯನ್ನು ಮಾಡಿಸಲಾಗುತ್ತಿದೆ; (ಜಿಲ್ಲಾವಾರು ವಿವರ ನೀಡುವುದು) | ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯಡಿ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಘನ ತ್ಯಾಜ್ಯ ನಿರ್ವಹಣೆ ಮಾಡಲು ಗುರಿ ಹೊಂದಿದ್ದು, ಅದರಂತೆ, ರಾಜ್ಯದಲ್ಲಿ ಒಟ್ಟಾರೆ 5952 ಗ್ರಾಮ ಪಂಚಾಯತಿಗಳ ಪೈಕಿ 4111 ಗ್ರಾಮ ಪಂಚಾಯತಿಗಳಲ್ಲಿ ಸ್ವಂತ ಕಟ್ಟಡಗಳು ಹಾಗೂ ಬಾಕಿ 1841 ಗ್ರಾಮ ಪಂಚಾಯತಿಗಳಲ್ಲಿ ಹಳೆ ಕಟ್ಟಡಗಳು ಹಾಗೂ ಕ್ಲಸ್ಟರ್ ಘಟಕಗಳಲ್ಲಿ ತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಮಾಡಲಾಗುತ್ತಿದೆ. ಪ್ರಸ್ತುತ ಈ ಘಟಕಗಳನ್ನು ಗ್ರಾಮ ಪಂಚಾಯತಿಗಳಿಂದ ನಿರ್ವಹಣೆ ಮಾಡಲು ಕ್ರಮವಹಿಸಲಾಗುತ್ತಿದೆ.<br>**ಜಿಲ್ಲಾವಾರು ಮಾಹಿತಿ ಅನುಬಂಧ-1ರಲ್ಲಿ ನೀಡಲಾಗಿದೆ.** |
| (ಆ) | ಶಿವಮೊಗ್ಗ ಜಿಲ್ಲೆಯ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗೆ ಬರುವ ಘಟಕಗಳು ಎಷ್ಟು; (ವಿವರ ನೀಡುವುದು) | ಶಿವಮೊಗ್ಗ ಜಿಲ್ಲೆಯ 262 ಗ್ರಾಮ ಪಂಚಾಯತಿಗಳಲ್ಲಿ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ 195 ಘನ ತ್ಯಾಜ್ಯ ವಿಲೇವಾರಿ ಘಟಕಗಳನ್ನು ನಿರ್ಮಾಣ ಮಾಡಲಾಗಿದೆ. 45 ಗ್ರಾಮ ಪಂಚಾಯತಿಗಳಲ್ಲಿ ಹಳೆ ಕಟ್ಟಡಗಳಲ್ಲಿ ಹಾಗೂ 22 ಗ್ರಾಮ ಪಂಚಾಯತಿಗಳು ಮಹಾನಗರ ಪಾಲಿಕೆ, ನಗರ ಸಭೆ ಹಾಗೂ ಪಟ್ಟಣ ಪಂಚಾಯತಿಯೊಂದಿಗೆ ಒಡಂಬಡಿಕೆ ಮಾಡಿಕೊಂಡು ತ್ಯಾಜ್ಯ ನಿರ್ವಹಣೆ ಮಾಡಲಾಗುತ್ತಿದೆ. |
| (ಇ) | ಈ ಘಟಕಗಳ ನಿರ್ವಹಣೆ ಮಾಡಲು ವರ್ಷಕ್ಕೆ ತಗಲುವ ವೆಚ್ಚವೆಷ್ಟು; ಅದರಲ್ಲಿ ರಾಜ್ಯ ಸರ್ಕಾರದ ಅನುದಾನವೆಷ್ಟು; ಕೇಂದ್ರ ಸರ್ಕಾರದ ಅನುದಾನವೆಷ್ಟು; | ಘನ ತ್ಯಾಜ್ಯವನ್ನು ಗ್ರಾಮ ಪಂಚಾಯತಿಗಳಿಂದ ನಿರ್ವಹಣೆ ಮಾಡಲಾಗುತ್ತಿದ್ದು, ಗ್ರಾಮ ಪಂಚಾಯತಿಗಳು ಸ್ಥಳೀಯ GPLF/SHG ಒಕ್ಕೂಟಗಳಿಂದ ತ್ಯಾಜ್ಯ ಸಂಗ್ರಹಣೆ ವಿಲೇವಾರಿ ಮತ್ತು ನಿರ್ವಹಣೆ ಮಾಡಲಾಗುತ್ತಿದೆ. ಪ್ರತಿ ತಂಡದಲ್ಲಿ ಮೂರರಿಂದ ಆರು ಸದಸ್ಯರು (ಮಹಿಳಾ ಚಾಲಕರನ್ನು ಸೇರಿ) ಕಾರ್ಯನಿರ್ವಹಿಸುತ್ತಿದ್ದು, ದಿನಾಂಕ:18.07.2022 ರಂದು ಸರ್ಕಾರದಿಂದ ಹೊರಡಿಸಲಾದ ಸುತ್ತೋಲೆ ಸಂಖ್ಯೆ: ಕಪಂರಾಅ/ಅಭಿವೃದ್ಧಿ/308/2022 ರಂತೆ ಪ್ರತಿ ಸದಸ್ಯರಿಗೆ ಪ್ರತಿ ಮಾಹೆ ಕನಿಷ್ಟ ರೂ.5,000 ಮತ್ತು ಗರಿಷ್ಟ ರೂ.7,500ಗಳಷ್ಟು ಗೌರವಧನವನ್ನು ನಿಗದಿಪಡಿಸಲಾಗಿದೆ. ಈ ಮೊತ್ತವನ್ನು ಗ್ರಾಮ ಪಂಚಾಯತಿ ಸ್ವಂತ ಸಂಪನ್ಮೂಲದಿಂದ ಮತ್ತು ಘನ ತ್ಯಾಜ್ಯ ನಿರ್ವಹಣೆಯ ಬಳಕೆದಾರರ ಶುಲ್ಕದಿಂದ ಭರಿಸಲಾಗುತ್ತಿದೆ.<br><br>ಘಟಕಗಳ ನಿರ್ವಹಣೆಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಯಾವುದೇ ಅನುದಾನವನ್ನು ಪ್ರತ್ಯೇಕವಾಗಿ ಒದಗಿಸಿರುವುದಿಲ್ಲ. |

| | | |
|---|---|---|
| (ಈ) | ಈ ಘಟಕ ನಿರ್ವಹಣೆಗೆ ತಗಲುವ ವೆಚ್ಚವನ್ನು ಯಾವ ಯಾವ ಅನುದಾನದಿಂದ ಬಿಡುಗಡೆ ಮಾಡಲಾಗುತ್ತಿದೆ; ಮತ್ತು ಮುಂದಿನ ವರ್ಷಗಳಲ್ಲಿ ಇದರ ನಿರ್ವಹಣೆ ಯಾವ ರೀತಿ ಮಾಡಲಾಗುವುದು; (ವಿವರ ನೀಡುವುದು) | ಘನ ತ್ಯಾಜ್ಯ ಘಟಕ ನಿರ್ವಹಣೆ ವೆಚ್ಚವನ್ನು ಬಳಕೆದಾರರ ಶುಲ್ಕ ಮತ್ತು ಗ್ರಾಮಪಂಚಾಯತಿ ಸ್ವಂತ ಸಂಪನ್ಮೂಲದಿಂದ ಭರಿಸಲಾಗುತ್ತಿದೆ.<br>ಮುಂದಿನ ದಿನಗಳಲ್ಲಿ ಘಟಕಗಳ ನಿರ್ವಹಣೆ ಕುರಿತು ದಿನಾಂಕ 18.07.2022ರಂದು ಸರ್ಕಾರದಿಂದ ಹೊರಡಿಸಲಾದ ಸುತ್ತೋಲೆಯಲ್ಲಿ ವಿವರಿಸಲಾಗಿದ್ದು, ಅದರಂತೆ, ಕ್ರಮವಹಿಸಲು ಯೋಜನೆ ರೂಪಿಸಲಾಗಿದೆ.<br>**(ಸುತ್ತೋಲೆಯನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ.)** |
| (ಉ) | ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಕೊಡಿಗೀಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಟಿ. ಹೊಸಹಳ್ಳಿ ಗ್ರಾಮದಲ್ಲಿ ನಿರ್ಮಿಸಿರುವ ತ್ಯಾಜ್ಯ ವಿಲೇವಾರಿ ಘಟಕದಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿದ್ದು, ಬೇರೆ ಕಡೆ ಸ್ಥಳಾಂತರಿಸಲು ಸರ್ಕಾರ ಕೈಗೊಂಡ ಕ್ರಮವೇನು? | ತುರುವೇಕೆರೆ ತಾಲ್ಲೂಕಿನ ಕೊಡಗೀಹಳ್ಳಿ ಗ್ರಾಮಪಂಚಾಯತಿಯ ತ್ಯಾಜ್ಯ ನಿರ್ವಹಣೆಯನ್ನು ಆನೆಕೆರೆ ಗ್ರಾಮ ಪಂಚಾಯತಿರವರೊಂದಿಗೆ ಕ್ಲಸ್ಟರ್ ಮಾದರಿಯಲ್ಲಿ ಒಡಂಬಡಿಕೆ ಮಾಡಿಕೊಂಡು ವಿಲೇವಾರಿ ಮಾಡಲಾಗುತ್ತಿದೆ.<br>ಟಿ. ಹೊಸಹಳ್ಳಿ ಗ್ರಾಮದಲ್ಲಿ ನಿರ್ಮಿಸಿರುವ ಘಟಕವು ಪಟ್ಟಣ ಪಂಚಾಯತಿಗೆ ಸೇರಿದ್ದು, ಸಾರ್ವಜನಿಕರಿಗೆ ತೊಂದರೆಯಾಗದಂತೆ ವೈಜ್ಞಾನಿಕ ವಿಲೇವಾರಿ ಮಾಡಲು ಪಟ್ಟಣ ಪಂಚಾಯತಿಯವರು ಕ್ರಮವಹಿಸಬೇಕಾಗಿದೆ. |

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ - 538 ರ ಲಗತ್ತು.

# SWACHH BHARAT MISSION (G)

## ANNEXURE -1

| Sl. No | DISTRICT | No.of GPs | Total no. of Sheds available in GPs (New sheds + Old buildings) | No. of GPs in Cluster |
|---|---|---|---|---|
| 1 | Bagalakote | 195 | **116** | 79 |
| 2 | Ballari | 100 | **89** | 11 |
| 3 | Belagavi | 500 | **323** | 177 |
| 4 | Bengaluru Rural | 101 | **101** | 0 |
| 5 | Bengaluru Urban | 86 | **40** | 46 |
| 6 | Bidar | 185 | **55** | 130 |
| 7 | Chamarajanagara | 130 | **130** | 0 |
| 8 | Chikkaballapura | 157 | **58** | 99 |
| 9 | Chikkamagaluru | 226 | **182** | 44 |
| 10 | Chitradurga | 189 | **151** | 38 |
| 11 | Davanagere | 195 | **144** | 51 |
| 12 | Dharwad | 145 | **117** | 28 |
| 13 | DK | 223 | **200** | 23 |
| 14 | Gadag | 122 | **122** | 0 |
| 15 | Hassan | 264 | **229** | 35 |
| 16 | Haveri | 223 | **167** | 56 |
| 17 | Kalaburgi | 261 | **110** | 151 |
| 18 | Kodagu | 103 | **92** | 11 |
| 19 | Kolar | 154 | **132** | 22 |
| 20 | Koppala | 153 | **79** | 74 |
| 21 | Mandya | 233 | **215** | 18 |
| 22 | Mysore | 256 | **170** | 86 |
| 23 | Raichur | 179 | **0** | 179 |
| 24 | Ramanagara | 126 | **111** | 15 |
| 25 | Shivamogga | 262 | **79** | 183 |
| 26 | Tumakuru | 330 | **290** | 40 |
| 27 | Udupi | 155 | **124** | 31 |
| 28 | Uttarakannada | 229 | **188** | 41 |
| 29 | Vijayanagara | 137 | **78** | 59 |
| 30 | Vijayapura | 211 | **155** | 56 |
| 31 | Yadgiri | 122 | **64** | 58 |
| **TOTAL** | | **5952** | **4111** | **1841** |